ಸಾಕ್ಷಿಗೆ ದಿನಾಂಕ **30-10-2025** ರಂದು ಪ್ರಮಾಣವಚನ ಬೋಧಿಸಲಾಯಿತು.

ಪಾಟೀ ಸವಾಲುಃ ವಾದಿ ಪರ ವಕೀಲರಾದ ಶ್ರೀ ಕೆ.ವಿ. ಶಂಕರಪ್ಪ, ರವರಿಂದಃ-

14 ಜನ ಟ್ರಸ್ಟಿಗಳು ಇದ್ದಾರೆ, ಅವರ ಹೆಸರು ನೆನಪಿಲ್ಲ. ಲೀಕೀಸೂಫ್, ಸ್ಟೀಫನ್, ಯಶ್ವಂತ್ ಯಮನಪ್ಪ ರವರ ಹೆಸರು ನೆನಪಿದೆ. 14 ಜನ ಜೀವಂತ ಇದ್ದಾರೋ, ಇಲ್ಲವೋ ಗೊತ್ತಿಲ್ಲ. 1 ನೇ ಸಪ್ಲಿಮೆಂಟರಿ ಟ್ರಸ್ಟ್ ಡೀಡ್ ದಿನಾಂಕ 14-10-2005 ಬಗ್ಗೆ ಗೊತ್ತಿದೆ, ನಾನು ಅದರಲ್ಲಿ ಇದ್ದೇನೆ. ಅದರಲ್ಲಿ 12 ಜನ ಟ್ರಸ್ಟಿಗಳು ಇದ್ದಾರೆ, ಅವರಲ್ಲಿ ಕೆಲವರ ಹೆಸರು ನೆನಪಿದೆ. ಲೀಕೀಸೂಫ್, ಯಶ್ವಂತ್ ಯಮನಪ್ಪ ಯಾವ ದಿನಾಂಕದಂದು ರಾಜೀನಾಮೆ ಕೊಟ್ಟಿದ್ದಾರೆ ನೆನಪಿಲ್ಲ. ಯಾವುದೇ ರಾಜೀನಾಮೆ ಅಂಗೀಕಾರ ಮಾಡಬೇಕಾದರೆ ಮೀಟಿಂಗ್ ಕರೆದು ರೆಸಲ್ಯೂಷನ್ ಮಾಡಿ ರಾಜೀನಾಮೆ ಒಪ್ಪಿಕೊಳ್ಳಬೇಕು ಎಂದರೆ ಸರಿ. ನನಗೆ ಮೀಟಿಂಗ್ ಮಾಡಿದ ಬಗ್ಗೆ, ರೆಸಲ್ಯೂಷನ್ ಮಾಡಿದ ಬಗ್ಗೆ ನೆನಪಿಲ್ಲ. ಆ ರೀತಿಯ ದಾಖಲೆಗಳನ್ನು ನಾನು ನೋಡಿದ ಬಗ್ಗೆ ನೆನಪಿಲ್ಲ. ನಾನು ಹೇಳಿದಂತೆ ಅವರಿಬ್ಬರೂ ರಾಜೀನಾಮೆ ಕೊಟ್ಟಿಲ್ಲ, ಯಾವುದೇ ಮೀಟಿಂಗ್ ಮಾಡಿಲ್ಲ ಮತ್ತು ಅವರ ರಾಜೀನಾಮೆ ಅಂಗೀಕಾರವಾಗಿಲ್ಲ ಎಂದರೆ ಸರಿಯಲ್ಲ. ಅವರಿಬ್ಬರೂ ಟ್ರಸ್ಟಿಗಳಾಗಿ ಈಗಲೂ ಮುಂದುವರೆದಿದ್ದಾರೆ ಎಂದರೆ ಸರಿ. ಅವರಿಬ್ಬರೂ ಈಗ ಮೃತಪಟ್ಟಿದ್ದಾರೆ. ಪ್ರಸಕ್ತ ದಾವೆಯನ್ನು ಯಶ್ವಂತ್ ಯಮನಪ್ಪ ಹಾಕಿದ್ದಾರೆ ಎಂದರೆ ಸರಿ. ಈ ದಾವೆ ಚಾಲ್ತಿಯಲ್ಲಿದ್ದಾಗ ಅವರು ಮೃತಪಟ್ಟರು ಎಂದರೆ ಸರಿ.

ಸಪ್ಲಿಮೆಂಟರಿ 1 ನೇ ಟ್ರಸ್ಟ್ ಡೀಡ್ ದಿನಾಂಕ 14-10-2005 ರಲ್ಲಿ ಆರು ಜನ ಟ್ರಸ್ಟಿಗಳಾಗಿ ಹೊಸದಾಗಿ ಸೇರ್ಪಡೆಯಾದರು, ಅವರಲ್ಲಿ ನಾನೂ ಒಬ್ಬ. ಡಾಃ ಫ್ರಾನ್ಸಿಸ್ ಜಾಕ್ಸನ್, ಐಜಾಕ್ ವರ್ಗೀಸ್, ಪ್ರಸಾದ್ ರಾವ್ ಮತ್ತು ಇತರೆ. ಹೊಸದಾಗಿ ಟ್ರಸ್ಟಿಗಳನ್ನು ಸೇರಿಸಿಕೊಳ್ಳಲು, ಎಲ್ಲಾ ಟ್ರಸ್ಟಿಗಳು ಸೇರಿ ಮೀಟಿಂಗ್ ಮಾಡಿ ರೆಸಲ್ಯೂಷನ್ ಮಾಡಿ ತೆಗೆದುಕೊಳ್ಳಬೇಕು ಎಂದರೆ ನನಗೆ ಗೊತ್ತಿಲ್ಲ. ನನ್ನನ್ನು ಮತ್ತು ಇತರೆ 5 ಜನರನ್ನು ಸೇರ್ಪಡೆ ಮಾಡಿಕೊಳ್ಳುವಾಗ ಯಾವುದಾದರೂ

ರೆಸಲ್ಯೂಷನ್ ಮಾಡಿದ ಬಗ್ಗೆ ನನಗೆ ಗೊತ್ತಿಲ್ಲ. ಕ್ರಮಬದ್ಧವಾಗಿ ಯಾವುದೇ ಮೀಟಿಂಗ್, ರೆಸಲ್ಯೂಷನ್ ಮಾಡದೇ ಅಕ್ರಮವಾಗಿ ನಾವು 1 ನೇ ಸಪ್ಲಿಮೆಂಟರಿ ಟ್ರಸ್ಟ್ ಡೀಡ್ ನಲ್ಲಿ ಸೇರ್ಪಡೆಯಾಗಿದ್ದೇವೆ ಎಂದರೆ ಸರಿಯಲ್ಲ. ನಾನು ಅಕ್ರಮವಾಗಿ ಸೇರ್ಪಡೆಯಾಗಿದ್ದೀನಿ ಎಂದು ಪ್ರಶ್ನೆ ಮಾಡಿದ್ದಕ್ಕೆ ನಾನು ರಾಜೀನಾಮೆ ಸಲ್ಲಿಸಿದ್ದೇನೆ ಎಂದರೆ ಸರಿಯಲ್ಲ. ನನ್ನ ರಾಜೀನಾಮೆ ಪತ್ರವನ್ನು ದಿನಾಂಕ 31-05-2007 ರಂದು ಟ್ರಸ್ಟ್ ಗೆ ಸಲ್ಲಿಸಿದ್ದೇನೆ ಎಂದರೆ ಸರಿಯಲ್ಲ. ದಿನಾಂಕ 31-05-2007 ರಂದು ನನ್ನ ರಾಜೀನಾಮೆ ಅಂಗೀಕಾರ ಮಾಡಿದ್ದಾರೆ ಎಂದರೆ ಸರಿಯಲ್ಲ. ನಾನು ಅಕ್ರಮವಾಗಿ ಮುಂದುವರೆಯುತ್ತಿದ್ದ ಕಾರಣ ಯಾವುದೇ ರೆಸಲ್ಯೂಷನ್ ಮಾಡುವ ಅವಶ್ಯಕತೆ ಕಂಡುಬಂದಿಲ್ಲ ಎಂದರೆ ಸರಿಯಲ್ಲ. ಈಗ ತೋರಿಸಿದ ರಾಜೀನಾಮೆ ಪತ್ರ (ನಿಪಿ-9 ಎಂದು ನಿಶಾನೆಗೊಂಡಿದೆ) ನಾನೇ ನೀಡಿದ್ದೇನೆ ಎಂದರೆ ಸರಿಯಲ್ಲ. ಅದರಲ್ಲಿರುವ ಸಹಿ ನನ್ನದೇ ಎಂದರೆ ಸರಿಯಲ್ಲ. ಉದ್ದೇಶಪೂರ್ವಕವಾಗಿ ನನ್ನ ಸಹಿ ನಿರಾಕರಿಸಿದ್ದೇನೆ ಎಂದರೆ ಸರಿಯಲ್ಲ.

ದಿನಾಂಕ 21-02-2014 ರಂದು 2 ನೇ ಸಪ್ಲಿಮೆಂಟರಿ ಟ್ರಸ್ಟ್ ಡೀಡ್‌ಗೆ ಪ್ರಸಾದ್ ರಾವ್ ಮತ್ತು ಐಸಾಕ್ ವರ್ಗೀಸ್ ರಾಜೀನಾಮೆ ಕೊಟ್ಟ ಬಗ್ಗೆ ನೆನಪಿದೆ, ಇನ್ನು ಇತರೆ ಮೂರು ಜನರ ಹೆಸರು ನೆನಪಿಲ್ಲ. ಯಶ್ವಂತ್ ಯಮನಪ್ಪ ತೀರಿಕೊಂಡ ಮೇಲೆ ದಿನೇಶ್ ಕೆ ಸ್ಟೀಫನ್ ಮೂಲ ಟ್ರಸ್ಟ್ ಡೀಡ್ ಗೆ ಟ್ರಸ್ಟಿಯಾಗಿ ಸೇರ್ಪಡೆಯಾಗಿ ಜನರಲ್ ಸೆಕ್ರೆಟರಿಯಾಗಿದ್ದರು ಎಂದರೆ ಸರಿಯಲ್ಲ. ಅವರು ಯಾರು ಎಂದು ನನಗೆ ಗೊತ್ತಿಲ್ಲ. ಅವರನ್ನು ನಾನು ನೋಡಿದ್ದೇನೆ. ದಿನೇಶ್ ಕೆ ಸ್ಟೀಫನ್ ರವರು ಮಾಡಿಕೊಂಡಿರುವ ಸಪ್ಲಿಮೆಂಟರಿ ಟ್ರಸ್ಟ್ ಡೀಡ್ ಸತ್ಯವಾದದ್ದು ಎಂದರೆ ಸರಿಯಲ್ಲ. ದಿನಾಂಕ 30-01-2020 ರಲ್ಲಿ ಒಂದು ಠರಾವು ಮಾಡಿ ಅವರಿಗೆ ಅಧಿಕಾರ ಕೊಟ್ಟಿದ್ದಾರೆ ಎಂದರೆ ಸರಿಯಲ್ಲ. ಯಶ್ವಂತ್ ಯಮನಪ್ಪ ಟ್ರಸ್ಟ್‌ನ ಮೂಲ ಸ್ಥಾಪಕ ಎಂದರೆ ಸರಿ.

ದಿನಾಂಕ 14-10-2005 ರಲ್ಲಿ 1 ನೇ ಸಪ್ಲಿಮೆಂಟರಿ ಟ್ರಸ್ಟ್ ಡೀಡ್ ನ್ನು ಮಾಡಿಕೊಂಡರು ಎಂದರೆ ಸರಿ. ನಾನು ಅಕ್ರಮವಾಗಿ ಟ್ರಸ್ಟಿಗೆ ಸೇರ್ಪಡೆಗೊಂಡು ಟ್ರಸ್ಟ್ ನ ವ್ಯವಹಾರಗಳಲ್ಲಿ ಕೈತೂರಿಸಿ ದುರುಪಯೋಗಪಡಿಸಿಕೊಂಡಿದ್ದೇನೆ ಎಂದರೆ ಸರಿಯಲ್ಲ. ಆದ್ದರಿಂದಲೇ ನನ್ನಿಂದ ರಾಜೀನಾಮೆ ಪಡೆದರು ಎಂದರೆ ಸರಿಯಲ್ಲ. ದಿನಾಂಕ 28-06-2013 ರಂದು ಲೀಕೀಸೂಪ್ ರವರು ತೀರಿಕೊಂಡರು ಎಂದರೆ ಸರಿ. ಅವರು ತೀರಿಕೊಂಡ ನಂತರ ಅವರ ಮಗ ಮತ್ತು ಮಗಳನ್ನು ಸೇರ್ಪಡೆ ಮಾಡಿಕೊಂಡರು ಎಂದರೆ ಸರಿ. ಎರಡನೇ ಸಪ್ಲಿಮೆಂಟರಿ ಟ್ರಸ್ಟ್ ಡೀಡ್ ಮೂಲಕ ಅವರು ಸೇರಿಕೊಂಡರು ಎಂದರೆ ಸರಿ. ಅವರಿಬ್ಬರೂ ಟ್ರಸ್ಟ್ ನ ಆಸ್ತಿಯನ್ನು ಕಬಳಿಸುವುದಕ್ಕೆ ಮತ್ತು ಹಣ ದುರುಪಯೋಗ ಮಾಡಿಕೊಂಡ ಕಾರಣ ಅವರನ್ನು ಟ್ರಸ್ಟ್ ನಿಂದ ತೆಗೆದುಹಾಕಲಾಯಿತು ಎಂದರೆ ಸರಿಯಲ್ಲ. ಅವರಿಬ್ಬರ ಮೇಲೆ ಮೃತ ವಾದಿ ಕೋಲಾರ ಎಸ್.ಪಿ. ರವರಿಗೆ ದೂರನ್ನು ಸಲ್ಲಿಸಿದ್ದರು ಎಂದರೆ ಸರಿಯಲ್ಲ. ದಿನೇಶ್ ರವರನ್ನು ಸೇರ್ಪಡೆ ಮಾಡಿಕೊಂಡಿರುವುದು ಸರಿ ಅಲ್ಲ ಎಂದು ಓ.ಎಸ್. 10/2018 ಹಾಕಿದ್ದೇವೆ ಎಂದರೆ ಸರಿಯಲ್ಲ.

ದಿನಾಂಕ 15-11-2018 ರಲ್ಲಿ ಒಂದು ಸಭೆಯನ್ನು ಕರೆದು, ಎಲ್ಲಾ ವಿದ್ಯಾಮಾನ ಪರಿಶೀಲಿಸಿ 1 ನೇ ಪ್ರತಿವಾದಿ ತನ್ನ ತಂದೆ ಹೊರತುಪಡಿಸಿ ಬೇರೆ ಯಾರೂ ಮೂಲ ಸ್ಥಾಪಕರು ಇಲ್ಲ ಎಂದು ಒಂದು ಪತ್ರವನ್ನು ಕೊಟ್ಟರು ಎಂದರೆ ನೆನಪಿಲ್ಲ. ನಾನು ಅಕ್ರಮವಾಗಿ ಲೆಟರ್-ಹೆಡ್ ಉಪಯೋಗಿಸುವುದು, ದಾಖಲೆಗಳನ್ನು ತಿದ್ದುವುದು ಮಾಡುತ್ತಿದ್ದೆ ಎಂದರೆ ಸರಿಯಲ್ಲ. ನಾನು ಮತ್ತು ಪ್ರತಿವಾದಿಗಳು ಟ್ರಸ್ಟ್ ನ ಧ್ಯೇಯೋದ್ದೇಶಗಳಿಗೆ ವಿರುದ್ಧವಾಗಿ ನಡೆದುಕೊಳ್ಳುತ್ತಿದ್ದೆವು ಎಂದರೆ ಸರಿಯಲ್ಲ. ಆ ಟ್ರಸ್ಟ್ ನ ಆಸ್ತಿಗಳನ್ನು ಕಬಳಿಸಲು ದಿನಾಂಕ 21-12-2018 ರಂದು ಟ್ರಸ್ಟ್ ಡೀಡ್ ಮಾಡಿದ್ದೇವೆ ಎಂದರೆ ಸರಿಯಲ್ಲ, ಆದರೆ ತಿದ್ದುಪಡಿ ಟ್ರಸ್ಟ್ ಡೀಡ್ ಆ ದಿನಾಂಕದಂದು ಮಾಡಿದ್ದೇವೆ. ಅದು ಕ್ರಮಬದ್ಧವಾದ ಡೀಡ್ ಅಲ್ಲ ಎಂದರೆ ಸರಿಯಲ್ಲ. ನಾವು ಅಂದರೆ ಪ್ರತಿವಾದಿಗಳು ದಾಖಲೆಗಳನ್ನು ತಿದ್ದಿ ಟ್ರಸ್ಟ್ ಗೆ ವಿರುದ್ಧವಾಗಿ ಕೆಲಸ ಮಾಡುತ್ತಿದ್ದೇವೆ ಎಂದರೆ ಸರಿಯಲ್ಲ.

ನನಗೂ ಮತ್ತು ಇತರೇ ಪ್ರತಿವಾದಿಗಳಿಗೂ ಯಾವುದೇ ಹಕ್ಕು ಇಲ್ಲದಿದ್ದರೂ ಟ್ರಸ್ಟ್ ನ ಆಸ್ತಿಗಳ ಮೇಲೆ ಅತಿಕ್ರಮಣ ಪ್ರವೇಶ ಮಾಡುತ್ತಿದ್ದೇವೆ ಎಂದರೆ ಸರಿಯಲ್ಲ, ನಾವೇ ಪ್ರಾರಂಭದಿಂದ ಸ್ವಾಧೀನ ಇದ್ದೇವೆ. ನಮಗೆ ಯಾವುದೇ ಹಕ್ಕು, ಅಧಿಕಾರ ಇಲ್ಲದೇ ಇದ್ದರೂ ಬ್ಯಾಂಕಿನಲ್ಲಿ ಅಕ್ರಮವಾಗಿ ಬ್ಯಾಂಕ್ ಖಾತೆ ತೆಗೆದಿದ್ದೇವೆ ಎಂದರೆ ಸರಿಯಲ್ಲ, ಶಾಲೆ ಇರುವ ಕಾರಣ ಬ್ಯಾಂಕಿನ ಖಾತೆ ತೆಗೆಯಲಾಗಿದೆ. ಬ್ಯಾಂಕಿನವರು ಟ್ರಸ್ಟ್ ಗೆ ನಮ್ಮ ವಿರುದ್ಧ ಪತ್ರ ಕೊಟ್ಟಿದ್ದಾರೆ ಎಂದರೆ ಸರಿಯಲ್ಲ. ನಾವು ಬ್ಯಾಂಕಿನವರು ಶಾಮೀಲಾಗಿ ಬ್ಯಾಂಕ್ ಖಾತೆ ತೆಗೆದಿದ್ದೇವೆ ಎಂದರೆ ಸರಿಯಲ್ಲ. ವಾದಿ ಟ್ರಸ್ಟ್ ಗೂ ನಮಗೂ ಯಾವುದೇ ಸಂಬಂಧ ಇಲ್ಲ ಎಂದರೆ ಸರಿಯಲ್ಲ. ವಾದಿ ಟ್ರಸ್ಟ್ ಮತ್ತು ಆಸ್ತಿಗಳಿಗೂ ಯಾವುದೇ ಅಧಿಕಾರ ಇಲ್ಲದೇ ಇದ್ದರೂ ನಮ್ಮದು ಎಂದು ಸುಳ್ಳು ಪ್ರತಿಪಾದನೆ ಮಾಡುತ್ತಿದ್ದೇವೆ ಎಂದರೆ ಸರಿಯಲ್ಲ. ದಿನೇಶ್ ರವರೇ ಟ್ರಸ್ಟ್ ನ ವ್ಯವಹಾರ ನೋಡಿಕೊಳ್ಳುತ್ತಿದ್ದಾರೆ ಎಂದರೆ ಸರಿಯಲ್ಲ. ಅವರೇ ಟ್ರಸ್ಟ್ ನ ಮೇಲೆ ಹಕ್ಕು ಉಳ್ಳವರು ಎಂದರೆ ಸರಿಯಲ್ಲ. ದಿನೇಶ್ ರವರಿಗೆ ತೊಂದರೆ ಕೊಡಲು ಓ.ಎಸ್. 10/2018 ದಾವೆ ಹೂಡಿದ್ದೇವೆ ಎಂದರೆ ಸರಿಯಲ್ಲ. ಸುಳ್ಳು ಪ್ರಮಾಣಪತ್ರ ಸಲ್ಲಿಸಿ, ಸುಳ್ಳು ಸಾಕ್ಷ್ಯ ಹೇಳಿದ್ದೇನೆ ಎಂದರೆ ಸರಿಯಲ್ಲ.

ಮರುವಿಚಾರಣೆ: ಇಲ್ಲ

ಓ ಹೇ ಕೇ ಸ ಇ

ಸಹಿ/-
**(ಮಂಜುನಾಥ. ಜಿ.ಎ)**
ಪ್ರಧಾನ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರು
ಕೋಲಾರ